ಸೂರ್ಯನ ಮುಂದೆಯೇ ಫೋನ್ ಅನ್‌ಲಾಕ್ ಮಾಡಿದ್ದೆ; ಹಾಗೆ ಇದಕ್ಕೆ ಮುಂಚೆಯೂ ಮಾಡಿದ್ದೆ. ಅವನು ಇನ್ನೂ ಸಣ್ಣವನು, ಇದನ್ನೆಲ್ಲ ಗಮನಿಸಲಿಕ್ಕಿಲ್ಲವೆಂದು ನಿರ್ಲಕ್ಷಿಸಿದ್ದೇ ತಪ್ಪಾಯಿತೇನೋ. ಸುಮ್ಮನೆ ಆ ಮೆಸೇಜುಗಳನ್ನ ಡಿಲೀಟಾದರೂ ಮಾಡಿದ್ದರಾಗಿರೋದು. ಎಲ್ಲ ನಿರ್ಲಕ್ಷ್ಯತೆಯ ಪರಮಾವಧಿ! ಈಗಲಾದರೂ ಎಚ್ಚರಿಕೆಯಿಂದ ಕಾಯಿ ನಡೆಸಬೇಕೆಂದು ತಯರಾದವನೇ... ಒಂದು ಹಾರಿಕೆಯ ನಗುವಿನಲಿ 'ಏ ಅದಾ, ಅದೊಂದು ಸಣ್ಣಹುಡುಗಿ ಮಾರಾಯ್ತಿ, ಇತ್ತೀಚೆಗೆಲ್ಲೋ ಕಾನ್ಫರೆನ್ಸ್‌ಗೆ ಹೋಗಿದ್ದಾಗ ಸಿಕ್ಕಿದ್ಲು. ಅವಳಿಗೊಂಥರ ಇನ್‌ಫ್ಯಾಚುವೇಶನ್ ಅಂದ್ಕೋ. ಸಣ್ಣ ಹುಡುಗಿಯಲ್ವಾ? ನಾನೂ ಆಗೋಷ್ಟು ಹೇಳಿ ನೋಡಿದೆ. ಆದ್ರೂ ಸುಮ್ನೆ ಕಾಡ್ತಾಳೆ. ಸರೀ ಹುಡುಗಿ ಬೇಜಾರು ಮಾಡೋದ್ಬೇಡಾಂತ ನಾನೂ ಏನಾದ್ರು ಸಿಂಪಲ್ ಆಗಿ ರಿಪ್ಲೈ ಮಾಡ್ತೀನಿ ಅಷ್ಟೇ! ಆಮೇಲೆ ತಾನೇ ತಾನಾಗಿ ಸರಿ ಹೋಗ್ತಾಳೆ ಬಿಡು, ದೊಡ್ಡೋಳಾಗ್ತಾ ಆಗ್ತಾ.' ಇಷ್ಟಿಷ್ಟು ಉದ್ದದ ವಿವರಣೆ ಕೊಡಬಾರದಂತ ನಂಗೆ ಗೊತ್ತು. ಆದರೆ ಎಲ್ಲಿ ನಿಲ್ಲಿಸಬೇಕೆಂಬ ಗೊಂದಲದಲ್ಲಿ ನಾ ಮಾತಾಡುತ್ತಲೇ ಹೋಗುತ್ತಿದ್ದೆ. ಆ ಗ್ಯಾಪಿನಲ್ಲಿ ಇವಳು ಸರಸರನೆ ಸ್ಕ್ರಾಲ್ ಮಾಡುತ್ತ ಚಾಟೆಲ್ಲವನ್ನೂ ಓದಿಕೊಳ್ಳತೊಡಗಿದ್ದಳು. ನನಗೆ ಬೇರೆ ದಾರಿಯೇ ಉಳಿದಿರಲಿಲ್ಲ. ಅವಳ ಕೈಯಿಂದ ಮೊಬೈಲನ್ನು ಸೆಳೆದು ಕಿತ್ತುಕೊಳ್ಳುವುದು ತೀರ ಅನಾಗರಿಕ ವರ್ತನೆಯಾಗಿತ್ತು. ಯಾವತ್ತೂ ಹಾಗೆ ಅವಳ ಮೇಲೆ ನಾ ಹಾಯ್ದು ಹೋದದ್ದಿಲ್ಲ. ಈಗ ಅಳಿವುಉಳಿವಿನ ಪ್ರಶ್ನೆ. ನಾ ಹೆಚ್ಚುಕಡಿಮೆ ಅವಳ ಕೈಯಿಂದ ಮೊಬೈಲ್ ಕಿತ್ತೇಬಿಟ್ಟೆ. ಆದರೆ ಅದರಿಂದ ಉಪಯೋಗವಾಗುವ ಬದಲು ಸಮಸ್ಯೆ ಉಲ್ಬಣಿಸುವುದೇ ಆಗಿತ್ತು. 'ಏನದು ಅಷ್ಟೊಂದು ಇಂಟೆನ್ಸ್ ಮೆಸೇಜಸ್? ಸಾಲದಕ್ಕೆ ಅವಳು ಹಾಫ್ ನ್ಯೂಡ್ ಫೋಟೊ ಕಳಿಸಿದಾಳೆ? ಇದಕೇನರ್ಥ?' ಅವಳು ಚೀರಿದಳು. ಅಲ್ಲಿಗೆ ಇನ್ನೇನೂ ಹೇಳುವುದಿರಲಿಲ್ಲ. 'ಏ ಬಿಡು ಮಾರಾಯ್ತಿ, ಸುಮ್ನೆ ದೊಡ್ಡದು ಮಾಡ್ಬೇಡ. ನಾ ಅವಳಿಗೆ ಬುದ್ಧಿ ಹೇಳಿದೀನಿ.' 'ಹೇಳಿರ್ತೀರಿ ಹೇಳಿರ್ತೀರಿ, ಯಾಕಿಲ್ಲ? ಅದರ ಬದ್ಲು ಸಿಂಪಲ್ ಆಗಿ ಅವಳ ನಂ ಬ್ಲಾಕ್ ಮಾಡಿ ಸುಮ್ಮನಾಗ್ಬಹುದಿತ್ತಲ್ಲ? ಮ್?' ನಾನು ಈಗ ಏನು ಹೇಳುವುದು ತೋಚದೆ ಚೇರಿನಲ್ಲಿ ಕುಸಿದಿದ್ದೆ. ಅವಳಿಗೆ ನನ್ನ ಮೌನ ಬಲ ಕೊಟ್ಟಂತಿತ್ತು. ಅವಳು ದಾಳಿ ಮುಂದುವರೆಸಿದಳು. 'ಇದೇ ಕೆಲಸ ನಾ ಮಾಡಿದ್ರೆ ಸುಮ್ನಿರ್ತಿದ್ರಾ? ಏನೂ ಬೇಡ, ಮೊನ್ನೆ ಗಿರೀಶನ ಜೊತೆ ನಾನೂ ಪಾಪೂ ಬೀಚಿಗೆ ಹೋಗಿದ್ವೀಂತ ಎಷ್ಟು ರಂಪ ಮಾಡಿಲ್ಲ ನೀನು? ಅಯ್ಯೋ ಹಾಗೆಲ್ಲ ಏನಿಲ್ಲಪ್ಪಾ ಅಂದ್ರೆ ಏನಂದೆ? ನಂಗೆ ಗಂಡಸರ ಬುದ್ಧಿ ಗೊತ್ತು. ಅದಕ್ಕೇ ಹೇಳ್ತಿರೋದು ಅಂದೆ ಅಲ್ವಾ? ಎಲ್ಲ ಗಂಡಸರೂ ನಿಮ್ ತರಾನೇ ಇರ್ತಾರೆ ಅನ್ನೋ ಯೋಚ್ನೆ? ಮ್?' 'ಈಗ ನಿನ್ ಸಮಸ್ಯೆ ಏನ್ ನೀಲಿ? ನೀನು ಗಿರೀಶನ ಜೊತೆ ಹೆಚ್ಚು ಓಡಾಡ್ಬೇಡ ಅಂದಿದ್ದಾ ಅಥವಾ ನಾನು ಆ ಸಣ್ಣ ಹುಡುಗಿ, ಅದೇನೋ ಬುದ್ಧಿ ತಿಳೀದೆ ಮೆಸೇಜ್ ಮಾಡಿದೆ ಅಂತ ನಾ ಉದಾಸೀನ ಮಾಡಿ ಸುಮ್ಮನಾಗಿದ್ದಾ?' ನಾನೂ ರೇಗಿದ್ದೆ. 'ಎರಡೂ! ಎರಡೂ ಸಮಸ್ಯೆನೇ!' ಅವಳೂ ರೇಗಿದ್ದಳು. ಇದೇ ನಾ ಬರೆವ ಕತೆಯಲ್ಲಾಗಿದ್ದರೆ ನಾನು ಇರುವ ಬುದ್ಧಿಯೆಲ್ಲ ಖರ್ಚುಮಾಡಿ, ನನಗೆ ಬೇಕಾದ ಹಾಗೆ ಪ್ಲಾಟ್ ಮಾಡಿಕೋತಾ ಇದ್ದೆ. ಆದರೆ ನಿಜದಲ್ಲಿಇದೆಲ್ಲ ಎಷ್ಟೊಂದು ಕಷ್ಟ! ಇನ್ನು ಅಲ್ಲೇ ಕೂತರೆ ಅವಳು ನನ್ನ ಇನ್ನೂ ಇನ್ನೂ ಬೆಳಗಿ, ತೊಳೆದು, ಗಲಬರಿಸಿ ಚೆಲ್ಲುವುದರಲ್ಲಿ ಸಂದೇಹವಿರಲಿಲ್ಲ. ಹಾಗಾಗಿ ನಾ ಏನೂ ಮಾತಾಡದೆ ಅಲ್ಲಿಂದೆದ್ದು ಪಿನಾಕಿನಿ ಪಾರ್ಕಿನತ್ತ ಬಂದು ಕುಳಿತಿದ್ದೆ. ದಾರಿಯಲ್ಲೇ ಪ್ರದೀಪನ ಫೋನ್ ಬಂದಿತ್ತು, ಈಗ ಎತ್ತುವುದು ಬೇಡವೆಂದುಕೊಂಡು ಸುಮ್ಮನೆ ಪಾರ್ಕಿಗೆ ಬಂದು ಕೂತರೆ ಅವನು ವಾಟ್ಸಾಪ್‌ನಲ್ಲಿ ರಿಮೈಂಡರ್ ಕಳಿಸಿದ್ದ. 'ಇನ್ನೂ ಕತೆ ಬಂದಿಲ್ಲ, ಕಳಿಸೋ ಮಾರಾಯ'